# ಪುರಸಭೆ ಕುಂದಾಪುರ

## ಸೊಳ್ಳೆ ಕಡಿತದಿಂದ ಸ್ವಯಂ ರಕ್ಷಿಸಿಕೊಳ್ಳ ಹಾಗೂ ಚಿಕುಂಗುನ್ಯ ಜ್ವರ ತಡೆಗಟ್ಟಿ

ಚಿಕುಂಗುನ್ಯ ಜ್ವರ ಪಿಡುಗಿನಂತೆ ಹಬ್ಬುವ ಸಾಧ್ಯತೆ ಇದೆ. ಇದು ಹೆಚ್ಚಾಗಿ ಜನದಟ್ಟಣೆಯಿರುವ ನಗರ ಪ್ರದೇಶಗಳಲ್ಲಿ ಮಕ್ಕಳು,ದೊಡ್ಡವರು,ಬಡವರು,ಬಲ್ಲಿದವರು ಎಲ್ಲರನ್ನು ಕಾಡಿಸುತ್ತದೆ.

### ಚಿಂಕುಂಗುನ್ಯ ಜ್ವರ ಎಂದರೇನು?

ಎಡಿಸ್ ಈಜಿಪ್ಟೈ ಎಂಬ ಟೈಗರ್ ಸೊಳ್ಳೆ ಕಡಿತದಿಂದ ಹರಡುವ ತೀವ್ರ ಸ್ವರೂಪದ ರೋಗವೇ ಚಿಕುಂಗುನ್ಯ ಜ್ವರ.ಹಕ್ಕಿ ಜ್ವರಕ್ಕೂ ಚಿಕುಂಗುನ್ಯ ವೈರಾಣು ಜ್ವರಕ್ಕೂ ಯಾವುದೇ ಸಂಬಂಧವಿರುವುದಿಲ್ಲ.

### ರೋಗ ಲಕ್ಷಣಗಳು

- ಇದ್ದಕ್ಕಿದ್ದಂತೆ ಹೆಚ್ಚಾದ ಜ್ವರ ಬರುವುದು.
- ಮೈಕೈ ನೋವು,ಕೀಲು ನೋವು.
- ಮಾಂಸಖಂಡಗಳ ಸೆಳೆತ.
- ಬೆನ್ನು ಮೂಳೆ ನೋವು.
- ತುಂಬಾ ಸುಸ್ತು ಹೊಂದಿರುವುದು.

### ಮುನ್ನೆಚ್ಚರಿಕೆ ಕ್ರಮಗಳು

- ಕೂಲರ್‌ಗಳು, ಸಣ್ಣ ಪುಟ್ಟ ನೀರು ಸಂಗ್ರಹಿಸುವ ತೊಟ್ಟಿ ಅಥವಾ ಮಡಿಕೆಗಳನ್ನು ಆಗಾಗ ಗಮನಿಸಿ, ನಿಂತ ನೀರನ್ನು ಹೊರಚೆಲ್ಲಿ,ನೀರು ಶೇಖರಿಸುವ ತೊಟ್ಟಿಗಳನ್ನು ಕೊನೆಪಕ್ಷ ವಾರಕ್ಕೊಮ್ಮೆ ಸಂಪೂರ್ಣ ಖಾಲಿ ಮಾಡಿ ಬಟ್ಟೆಯಿಂದ ಒಣಗಿಸಿ ಹಾಗೂ 6-ಗಂಟೆಗಳ ನಂತರವೇ ಪುನಃ ನೀರು ತುಂಬಿಸಿಕೊಳ್ಳುವುದು.
- ಮನೆಯೊಳಗೆ ಕೀಟನಾಶಕಗಳನ್ನು ಸಿಂಪಡಿಸುವುದು.
- ಕೈಕಾಲುಗಳನ್ನು ಮುಚ್ಚುವಂತೆ ಉಡುಪು ಧರಿಸುವುದು.
- ಮಲಗುವಾಗ ಸೊಳ್ಳೆ ಪರದೆಗಳನ್ನು ಮತ್ತು ಸೊಳ್ಳೆ ಕಡಿತ ತಡೆಯುವ ಔಷಧಿಗಳನ್ನು ಬಳಸುವುದು.
- ಈಡಿಸ್ ಜಾತಿಯ ಸೊಳ್ಳೆಗಳು ಸಾಮಾನ್ಯವಾಗಿ ಹಗಲು ಹೊತ್ತಿನಲ್ಲಿ ಚಟುವಟಿಕೆ ಉಳ್ಳದ್ದಾಗಿದ್ದು ಹಗಲ್ಲಿನಲ್ಲಿಯೇ ಕಚ್ಚುವ್ವದರಿಂದ ಮನೆಯಲ್ಲಿ ಹಗಲು ಹೊತ್ತು ಸಹ ಸೊಳ್ಳೆ ನಿರೋಧಕಗಳನ್ನು ಬಳಸಿಕೊಳ್ಳವುದು.

### ಚಿಕುಂಗುನ್ಯ ಸೊಳ್ಳೆಗಳ ಸಂತಾನವೃದ್ಧಿಯಾಗುವುದೆಲ್ಲಿ?

- ಡ್ರಮ್‌ಗಳು , ಮಡಕೆಗಳು , ಬಕೆಟ್‌ಗಳು,ಹೂದಾನಿಗಳು , ಕುಂಡಗಳು ,ಬಾಟ್ಲಿಗಳು ಟಿನ್ ಡಬ್ಬಗಳು ,ಟೈರ್‌ಗಳು,ಮೇಲ್ಛಾವಣಿಯ ನೀರು ಹರಿದು ಹೋಗುವ ಜಾಗಗಳು,ನೀರು ಸಂಗ್ರಹವಾಗುವ ಕಟ್ಟೆಗಳು,ಜ್ವರಂಡಿಗಳು ಇತ್ಯಾದಿ ಜಾಗಗಳಲ್ಲಿ ಚಿಕುಂಗುನ್ಯ ಸೊಳ್ಳೆಗಳ ಸಂತಾನ ವೃದ್ಧಿಯಾಗುತ್ತದೆ.
- ಸೊಳ್ಳೆಗಳ ಸಂತಾನ ವೃದ್ಧಿಯಾಗುವ ಜಾಗಗಳನ್ನು ನಿವಾರಿಸುವುದರ ಮೂಲಕ ಚಿಕುಂಗುನ್ಯ ಜ್ವರ ತಡೆಗಟ್ಟಬಹುದು.

**ಹೆಚ್ಚಿನ ಮಾಹಿತಿಗಾಗಿ ಸರ್ಕಾರಿ ಆಸ್ಪತ್ರೇಯನ್ನು ಸಂಪರ್ಕಿಸಿರಿ.**

**ಅಧ್ಯಕ್ಷರು**
ಪುರಸಭೆ.ಕುಂದಾಪುರ

**ಮುಖ್ಯಾಧಿಕಾರಿ,**
ಪುರಸಭೆ.ಕುಂದಾಪುರ

PDF Created with deskPDF PDF Writer - Trial :: http://www.docudesk.com